ಯಾಕಾದರೂ ತಾನು ಈ ಅಂತ್ಯಸಂಸ್ಕಾರಕ್ಕೆ ಬಂದೆನೋ ಎನಿಸತೊಡಗಿತ್ತು. ತನ್ನನ್ನು ಎಲ್ಲರಿಗಿಂತಲೂ ಹೆಚ್ಚಾಗಿ ಪ್ರೀತಿಸಿದ ಪಾರ್ವತಜ್ಜಿಯನ್ನು ಮಣ್ಣಿಗೆ ಹಾಕುವುದನ್ನು ನೋಡಲಾರೆ, ನಾನು ಬರುವುದಿಲ್ಲ ಎಂದು ಹಠ ಹಿಡಿದು ಕುಳಿತಿದ್ದ ಶಂಕರನನ್ನು ಅವನ ಅಮ್ಮ ಮನವೊಲಿಸಿ ಕರೆದುಕೊಂಡು ಬಂದಿದ್ದಳು. ಅಲ್ಲಿ ಎಲ್ಲರೂ ಅಜ್ಜಿಯನ್ನು 'ಹೆಣ' ಎಂದು ಸಂಬೋಧಿಸುವುದನ್ನು ಕಂಡು 'ಮನುಷ್ಯನ ಜೀವನಕ್ಕೆ ಇಷ್ಟೇನಾ ಬೆಲೆ? ಜೀವನಪೂರ್ತಿ ಎಷ್ಟೇ ಒಳ್ಳೆಯವರಾಗಿ ಬದುಕಿದರೂ ಸತ್ತ ಮರುಕ್ಷಣವೇ ಅವರ ಬಟ್ಟೆ ತೆಗೆಯುವಂತೆ ಅವರ ಹೆಸರನ್ನೂ ಕೂಡ ಅವರಿಂದ ಬೇರ್ಪಡಿಸಿ 'ಹೆಣ' ಎಂದು ಕರೆಯುವ ಬಗ್ಗೆ ಯೋಚಿಸತೊಡಗಿದ. 'ನಾನು, ನನ್ನ ಕುಟುಂಬ ಎಂದು ಮನುಷ್ಯ ಕೊನೆಯವರೆಗೆ ಬಡಿದಾಡಿ, ತನ್ನ ಹೆಸರು ಶಾಶ್ವತವಾಗಿ ಉಳಿಯಬೇಕೆಂದು ಎಷ್ಟೆಲ್ಲಾ ಪ್ರಯತ್ನಿಸಿದರೂ ಸತ್ತ ಮರುಕ್ಷಣ 'ಹೆಣ' ಎಂಬ ಹೆಸರಿನಿಂದ ಕರೆಯಲ್ಪಡುವುದು ವಿಚಿತ್ರವಾದರೂ ಸತ್ಯ' ಎನಿಸಿತು. 'ಬಾರೋ ಅಜ್ಜಿಗೆ ಹೂವಿನ ಹಾರ ಹಾಕು' ಎಂದು ಅವನ ಅಮ್ಮ ಎಷ್ಟೇ ಒತ್ತಾಯಿಸಿದರೂ 'ಒಲ್ಲೆ, ನೀವೇ ಹಾಕ್ಕೊಳ್ಳಿ' ಎಂದು ಶಂಕರ ದೂರದಲ್ಲಿಯೇ ನಿಂತಿದ್ದ. ಅವನ ಕಣ್ಣಿನಲ್ಲಿ ಒಂದು ತೊಟ್ಟು ನೀರೂ ಬಾರದಿರುವುದು ಕುಟುಂಬದವರಿಗೆಲ್ಲಾ ಆಶ್ಚರ್ಯ ತಂದಿತ್ತು.

ಅಜ್ಜಿಯ ಸಾವಿನ ಸುದ್ದಿ ಬಂದ ದಿನ ಶಂಕರನು ಪಶುವೈದ್ಯಕೀಯ ಕಾಲೇಜಿನ ಯೂನಿವರ್ಸಿಟಿಯಲ್ಲಿದ್ದ. ಬಿ.ವಿ.ಎಸ್.ಸಿ ಮುಗಿಸಿ, ಕೆಲಸಕ್ಕೆ ಪ್ರಯತ್ನಿಸುತ್ತಿದ್ದ ಶಂಕರನಿಗೆ ಸರ್ಕಾರಿ ಹುದ್ದೆ ಅದರಲ್ಲೂ ತನ್ನ ಜಿಲ್ಲೆಯಲ್ಲೇ ಖಾಲಿಯಿದ್ದ ಹುದ್ದೆಯನ್ನು ಕೊಡಿಸಿದ್ದ ಯೂನಿವರ್ಸಿಟಿಯ ಹಿರಿಯ ಪ್ರೊಫೆಸರ್‌ರನ್ನು ಕಂಡು ಧನ್ಯವಾದ ಹೇಳಲು ಹೋಗಿದ್ದ. ತನ್ನ ಜಿಲ್ಲೆಯ ಸರ್ಕಾರಿ ಆಸ್ಪತ್ರೆಯಲ್ಲಿ ಪಶುವೈದ್ಯನಾಗಿ ಕೆಲಸಕ್ಕೆ ಸೇರಬೇಕೆಂಬ ಅವನ ಕನಸು ನನಸಾಗಿ ಪ್ರಥಮ ಸಂಬಳ ಆ ದಿನ ಕೈಗೆ ಬಂದಿತ್ತು. ಈ ಕೆಲಸಕ್ಕಾಗಿ ಬಹಳ ಪ್ರಯತ್ನಪಟ್ಟಿದ್ದ. ಇದ್ದ ಒಂದು ಹುದ್ದೆಗೆ ಹಲವರು ಅರ್ಜಿ ಹಾಕಿದ್ದರಿಂದ ತೀವ್ರ ಪೈಪೋಟಿಯಿತ್ತು. ಆದ್ದರಿಂದ ತನಗೆ ಗೊತ್ತಿರುವ ಪ್ರೊಫೆಸರ್‌ರಿಂದ ಮಂತ್ರಿಗಳಿಗೆ ಫೋನ್ ಮಾಡಿಸಿ, ಒಂದೆರಡು ಕಡೆ ಹಣವನ್ನೂ ಕೂಡ ಸಂದಾಯ ಮಾಡಿದ್ದ. ಕೊನೆಗೂ ಆ ಕೆಲಸ ಸಿಕ್ಕಿ ತನ್ನ ಕನಸು ನನಸಾಗಿದ್ದಕ್ಕೆ ಪ್ರೊಫೆಸರ್‌ಗೆ ಸಿಹಿಯನ್ನು ಕೊಟ್ಟು ಧನ್ಯವಾದ ಹೇಳಲು ಬಂದಿದ್ದಾಗ ಅವರ ಅಮ್ಮನ ಫೋನ್ ಬಂದಿತ್ತು. 'ಪಾರ್ವತಜ್ಜಿ ಹೋಗ್ಬಿಟ್ಳು ಕಣೋ' ಎಂದು ತಾಯಿ ಅಳುತ್ತಾ ಫೋನಿನಲ್ಲಿ ಹೇಳಿದ ಮಾತು ಕೇಳಿ ಶಂಕರನಿಗೆ ಸಿಡಿಲು ಹೊಡೆದಂತಾಗಿತ್ತು. ತಕ್ಷಣ ಬಸ್ಸು ಹತ್ತಿ ಊರಿಗೆ ಹೊರಟ. ಹೃದಯದ ಕಾಯಿಲೆಯಿಂದ ಹಾಸಿಗೆ ಹಿಡಿದಿದ್ದ ಪಾರ್ವತಜ್ಜಿ ಇಷ್ಟು ಬೇಗ ಸಾಯುತ್ತಾರೆಂದು ಶಂಕರ ನಿರೀಕ್ಷಿಸಿರಲಿಲ್ಲ. ಬಸ್ಸಿನಲ್ಲಿ ಕುಳಿತಿದ್ದ ಶಂಕರನಿಗೆ ತಾನು ಬಾಲ್ಯದಿಂದಲೂ ಅಜ್ಜಿಯೊಂದಿಗೆ ಕಳೆದ ನೆನಪುಗಳು, ಅವಳು ತನ್ನೊಂದಿಗೆ ಹಂಚಿಕೊಂಡಿದ್ದ ಅವಳ ಜೀವನದ ಕಷ್ಟಸುಖಗಳು, ಬೇರೆ ಎಲ್ಲಾ ಮೊಮ್ಮಕ್ಕಳಿಗಿಂತ ಅವಳು ತನ್ನ ಮೇಲೆ ತೋರುತ್ತಿದ್ದ ವಿಶೇಷ ಪ್ರೀತಿ ಮತ್ತು ಮುತುವರ್ಜಿ ನೆನೆದು ಮನಸ್ಸು ಆರ್ದ್ರವಾಯಿತು. ಬಸ್ಸಿನ ಚಕ್ರ ಮುಂದಕ್ಕೆ ಓಡಿದಂತೆ ಶಂಕರನ ನೆನಪಿನ ಚಕ್ರ ಹಿಂದಕ್ಕೆ ಓಡಿತು. ಅಜ್ಜಿಯು ಹೇಳಿದ್ದ ಅವಳ ಜೀವನಗಾಥೆಯ ಅಧ್ಯಾಯಗಳು ಒಂದೊಂದಾಗಿ ಮನಸ್ಸಿನ ಪರದೆಯ ಮೇಲೆ ಮೂಡಿಬರತೊಡಗಿದ್ದವು.

ಪಾರ್ವತಜ್ಜಿಯು ಐವತ್ತು ವರ್ಷಗಳ ಹಿಂದೆ ಆ ಮನೆಗೆ ಹಿರಿಯ ಸೊಸೆಯಾಗಿ ಬಲಗಾಲಿಟ್ಟು ಒಳಗೆ ಬಂದಾಗ ಈಗಿರುವ ದೊಡ್ಡದಾದ ಕಲ್ಲುಮನೆ ಇರಲಿಲ್ಲ. ಆಗ ಇದ್ದದ್ದು ಒಂದು ಹಳೆಯ ಪುಟ್ಟ ಮನೆ. ಆ ಮನೆಯಲ್ಲಿ ಆಕೆಯ ಗಂಡ, ಒಬ್ಬ ಮೈದುನ ಮತ್ತು ಮೂವರು ನಾದಿನಿಯರು ವಾಸವಿದ್ದರು. ಆಗಲೇ ಅತ್ತೆ- ಮಾವ ಸತ್ತು ಬಹಳ ಕಾಲವಾಗಿತ್ತು. ಹೊಸ ಕನಸುಗಳೊಂದಿಗೆ ಪಾರ್ವತಿಯು ಆ ಮನೆಗೆ ನಂಜಯ್ಯನ ಹೆಂಡತಿಯಾಗಿ ಕಾಲಿಟ್ಟಾಗ ದೊಡ್ಡದಾದ ಕೂಡು ಕುಟುಂಬ ಮತ್ತು ಅದರ ಜೊತೆಗೆ ಇರಬಹುದಾದ ಬರಬಹುದಾದ ಎಲ್ಲಾ ಸುಖದುಃಖಗಳೂ ತಾಪತ್ರಯಗಳೂ ಆ ಮನೆಯಲ್ಲಿ ತಾಂಡವವಾಡುತ್ತಿದ್ದವು.

ಜಮೀನು, ತೋಟ, ಗದ್ದೆಗಳಲ್ಲಿ ಬರುವ ಹಣ ಕೈಯಲ್ಲಿ ಉಳಿಯುತ್ತಿಲ್ಲ ಎಂಬುದನ್ನು ಗಮನಿಸಿದ ಪಾರ್ವತಿಯು ಅದನ್ನು ಸರಿಪಡಿಸಲು ಮೊದಲಿಗೆ ಮನೆಯ ಆಡಳಿತವನ್ನು ನಿಧಾನವಾಗಿ ತನ್ನ ಸುಪರ್ದಿಗೆ ತೆಗೆದುಕೊಂಡಳು. ಪಾರ್ವತಿಯು ಓದಿರದಿದ್ದರೂ ಅವಳಿಗಿದ್ದ ವ್ಯಾವಹಾರಿಕ ಜ್ಞಾನ, ಮಾತಿನ ಪ್ರೌಢಿಮೆ